# ನಗರಸಭಾ ಕಾರ್ಯಾಲಯ, ಹರಿಹರ

**ಖರೀದಿ ದಸ್ತಾವೇಜು**

**ಕ್ರಿಮಿನಾಶಕಗಳ ವಾರ್ಷಿಕ ಪೂರೈಕೆ ಟೆಂಡರ್ ದಸ್ತಾವೇಜು**

*ನಗರಸಭೆ, ಹರಿಹರ*

**ಜೂನ್–2009**

# ನಗರಸಭಾ ಕಾರ್ಯಾಲಯ,ಹರಿಹರ

ಫೋನ್ 08192–244266, ಸಹಾಯವಾಣಿ 08192– 242030,ಫ್ಯಾಕ್ಸ್: 08192–241024,
Website:www.harihararcity.gov.in

ನಂ.ನಸಹ/ವಾ.ಟೆಂ/ಸಿ.ಆರ್– /2009–10 ದಿನಾಂಕ:20/05/2009

**ವಾರ್ಷಿಕ ಟೆಂಡರ್ ಪ್ರಕಟಣೆ**

ಹರಿಹರ ನಗರಸಭೆಯು ನಗರದ 2009–10 ನೇ ಸಾಲಿಗೆ ಕೆಳಕಂಡ ವಿವಿಧ ಕಾರ್ಯಗಳಿಗೆ ಸಂಬಂಧಿಸಿದಂತೆ ನಿರ್ವಹಣೆ/ಸರಬರಾಜಿಗೆ ವಿವರವಾದ ಪ್ರಸ್ತಾವನೆಯನ್ನು ಆಹ್ವಾನಿಸುತ್ತದೆ. ಪ್ರಸ್ತಾವನೆಗಾಗಿ ಬೇಡಿಕೆಯ ದಸ್ತಾವೇಜನ್ನು(ಆರ್.ಎಫ್.ಪಿ) ಶ್ರೀ ಎಂ.ಕೆ.ನಲವಡಿ, ಪೌರಾಯುಕ್ತರು, ನಗರಸಭೆ, ಹರಿಹರ, ದಾವಣಗೆರೆ ಜಿಲ್ಲೆ, ದೂರವಾಣಿ: 08192–244266 ಇವರ ಕಾರ್ಯಾಲಯದಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಪ್ರಸ್ತಾವನೆಗಾಗಿ ಬೇಡಿಕೆಯ ದಸ್ತಾವೇಜಿನಲ್ಲಿ ನಿಗದಿಪಡಿಸಿರುವ ಮಾನದಂಡಗಳ ಆಧಾರದ ಮೇಲೆ ಪ್ರಸ್ತಾವನೆಗಳನ್ನು ಮೌಲ್ಯಮಾಪನ ಮಾಡಲಾಗುವುದು.

| ಕ್ರ.ಸಂ. | ಕಾರ್ಯನಿರ್ವಹಣೆ ವಿವರ | ಟೆಂಡರ್ ಫಾರಂ ಫೀ | ಇ.ಎಂ.ಡಿ. ಮೊತ್ತ |
|---|---|---|---|
| 1 | ನಗರದ ಬೀದಿ ದೀಪಗಳ ಕಾರ್ಯಾಚರಣೆ ಮತ್ತು ನಿರ್ವಹಣೆ | ರೂ.1500.00 | ರೂ.20000.00 |
| 2 | ತ್ಯಾಜ್ಯ ನೀರು ಸಂಸ್ಕರಣಾ ಕೇಂದ್ರದ ಕಾಯಾಚರಣೆ ಮತ್ತು ನಿರ್ವಹಣೆ | ರೂ.1500.00 | ರೂ.20000.00 |
| 3 | ಆರೋಗ್ಯ ಶಾಖೆಗೆ ಅಗತ್ಯವಿರುವ ಕ್ರಿಮಿನಾಶಕಗಳು ಹಾಗೂ ರಾಸಾಯನಿಕಗಳ ಸರಬರಾಜು | ರೂ.1000.00 | ರೂ.15000.00 |
| 4 | ಕಛೇರಿ ಕಾರ್ಯಗಳಿಗೆ ಅಗತ್ಯವಿರುವ ಡಾಟಾಎಂಟ್ರಿ ಆಪರೇಟರ್ ಹಾಗೂ ವಾಹನ ಚಾಲಕರುಗಳನ್ನು ಪೂರೈಸುವುದು | ರೂ.1000.00 | ರೂ.10000.00 |
| ಟೆಂಡರ್ ಫಾರಂ ಪಡೆಯುವ ವಿಧಾನ: ದಿನಾಂಕ:17/06/2009 ರಂದು ಸಾಯಂಕಾಲ 4.00 ಗಂಟೆಯೊಳಗೆ ಟೆಂಡರ್ ಫಾರಂಗಾಗಿ ನಿಗದಿತ ಶುಲ್ಕದೊಂದಿಗೆ ಕೋರಿಕೆಯನ್ನು ಪೌರಾಯುಕ್ತರು, ನಗರಸಭೆ, ಹರಿಹರ, ಇವರ ಹೆಸರಿನಲ್ಲಿ ನಗರಸಭೆಯಲ್ಲಿ ನೇರವಾಗಿ/ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೆಗೆಸಿದ ಡಿ.ಡಿ. ಅಥವಾ ಬ್ಯಾಂಕರ್ಸ್ ಚೆಕ್ ಮೂಲಕ ಪಾವತಿಸುವಂತೆ ಸಲ್ಲಿಸುವುದು | | | |
| ಟೆಂಡರ್ ಫಾರಂ ನೀಡುವ ದಿನಾಂಕ:19/06/2009 | | | |
| ಟೆಂಡರ್ ಫಾರಂ ಸಲ್ಲಿಸಲು ಅಂತಿಮ ದಿನಾಂಕ:22/06/2009 ರಂದು ಸಾಯಂಕಾಲ 4.00 ಗಂಟೆಯೊಳಗೆ | | | |

ಹೆಚ್ಚಿನ ವಿವರಗಳನ್ನು ಕೆಳ ಸಹಿದಾರರಿಂದ ಕಛೇರಿ ವೇಳೆಯಲ್ಲಿ/ಕಛೇರಿ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಅಧ್ಯಕ್ಷರು
ನಗರಸಭೆ, ಹರಿಹರ

ಪೌರಾಯುಕ್ತರು
ನಗರಸಭೆ, ಹರಿಹರ

# ಪೂರೈಕೆದಾರರಿಗೆ ಸೂಚನೆಗಳು

1. ಪೂರೈಕೆದಾರರು ಅನುಬಂಧ-1ರಲ್ಲಿ ತಮ್ಮ ವಿವರಗಳನ್ನು ಸಲ್ಲಿಸುವುದು.
2. ಕ್ರಿಮಿನಾಶಕಗಳನ್ನು ಪೂರೈಸಲಿಚ್ಛಿಸುವವರು ಅನುಬಂಧ-2 ರಲ್ಲಿ ತಮ್ಮ ದರಗಳನ್ನು ನಮೂದುಸುವುದು.
3. ಪ್ರತಿ ಪೂರೈಕೆದಾರರು ಕೇವಲ ಒಂದು (1) ಕೋಟೇಶನ್‌ನ್ನು ಸಲ್ಲಿಸಬಹುದು. ಒಂದಕ್ಕಿಂತ ಹೆಚ್ಚಿನ ಕೊಟೇಶನ್ ಸಲ್ಲಿಸುವ ಯಾವುದೇ ಪೂರೈಕೆದಾರರನ್ನು ಅನರ್ಹಗೊಳಿಸಲಾಗುವುದು.
4. ಕೊಟೇಶನ್ ನಿಗದಿತ ದಿನಾಂಕ (ಕೊಟೇಶನ್ ಚಾಲ್ತಿ ಅವಧಿ) ದಿಂದ ಆರು ಕ್ಯಾಲೆಂಡರ್ ತಿಂಗಳಿಗೆ ಕಡಿಮೆ ಇಲ್ಲದಂತೆ ಕೊಟೇಶನ್ ಚಾಲ್ತಿಯಲ್ಲಿರುತ್ತದೆ. ಅಗತ್ಯತೆಗಳನ್ನು ಪೂರೈಸದ ಯಾವುದೇ ಕೊಟೇಶನ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಖರೀದಿದಾರರು ಹೊಂದಿರುತ್ತಾರೆ.
5. ಪ್ರಸ್ತಾವನೆಯೊಂದಿಗೆ ರೂ.15000/- (ರೂಪಾಯಿ ಹದಿನೈದು ಸಾವಿರ ಮಾತ್ರ) ಇ.ಎಂ,.ಡಿ ಮೊತ್ತವನ್ನು ಪೌರಾಯುಕ್ತರು, ನಗರಸಭೆ, ಹರಿಹರ ಇವರಿಗೆ ಪಾವತಿಯಾಗುವಂತೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್ ಮುಖಾಂತರ ಸಲ್ಲಿಸಬೇಕು.
6. ಟೆಂಡರ್ ದಾರರು ಎಲ್ಲಾ ಸಾಮಗ್ರಿಗಳ ದರವನ್ನು ಕಡ್ಡಾಯವಾಗಿ ನಮೂದಿಸಬೇಕು.
7. ಟೆಂಡರ್ ದಾರರು ಮೌಲ್ಯವರ್ಧಿತ ತೆರಿಗೆ(ವ್ಯಾಟ್) ನೋಂದಣಿದಾರರಾಗಿರಬೇಕು. ನೋಂದಣಿ ಪ್ರತಿಯೊಂದಿಗೆ 2007-08 ಸಾಲಿನ ಮಾರಾಟ ತೀರುವಳಿ ಪತ್ರ ನಮೂನೆ 53 ಹಾಗೂ ಮಾರಾಟ ತೆರಿಗೆ ಅಸೆಸ್ ಮೆಂಟ್ ಪ್ರತಿಯನ್ನು ಟೆಂಡರ್ ನೊಂದಿಗೆ ಲಗತ್ತಿಸತಕ್ಕದ್ದು.
8. ಟೆಂಡರ್ ದಾರರು 2008-09 ಸಾಲಿನ ಅದಾಯ ತೆರಿಗೆ ಪಾವತಿಸಿದ ಬಗ್ಗೆ ತೀರುವಳಿ ಪತ್ರವನ್ನು ಲಗತ್ತಿಸತಕ್ಕದ್ದು.
9. ಟೆಂಡರ್‌ದಾರರು ಕ್ರಿಮಿನಾಶಕಗಳ ತಯಾರಕರು/ ಅಧಿಕೃತ ಡೀಲರರಾಗಿರಬೇಕು ಹಾಗೂ ಅಧಿಕೃತ ಡೀಲರ್ ಶಿಪ್ ದಾಖಲೆಗಳನ್ನು ಟೆಂಡರ್ ನೊಂದಿಗೆ ಲಗತ್ತಿಸತಕ್ಕದ್ದು.
10. ಟೆಂಡರ್ ದಾರರು ಸರಬರಾಜು ಮಾಡುವ ಎಲ್ಲಾ ಸಾಮಗ್ರಿಗಳು ಐ.ಎಸ್.ಐ. ಗುಣಮಟ್ಟದ್ದಾಗಿರಬೇಕು ಹಾಗೂ ಗುಣಮಟ್ಟದ ಬಗ್ಗೆ ಪ್ರಾಮಾಣೀಕೃತ ದಾಖಲೆಗಳನ್ನು ಒದಗಿಸಬೇಕು.
11. ಟೆಂಡರ್‌ದಾರರು ಕ್ರಿಮಿನಾಶಕಗಳ ಮಾರಾಟ ಪರವಾನಗಿ ಹೊಂದಿರಬೇಕು ಹಾಗೂ ಕೇಳಿರುವ ಎಲ್ಲಾ ಕ್ರಿಮಿನಾಶಕಗಳು ಪರವಾನಗಿ ಪ್ರತಿಯಲ್ಲಿ ಸೇರ್ಪಡೆಗೊಂಡಿರಬೇಕು. ಪರವಾನಗಿ ಪ್ರತಿಯನ್ನು ಟೆಂಡರ್ ನೊಂದಿಗೆ ಲಗತ್ತಿಸತಕ್ಕದ್ದು.
12. ಟೆಂಡರ್ ದಾರರು ಈಹಿಂದೆ ಕ್ರಿಮಿನಾಶಕಗಳನ್ನು ಸರಬರಾಜು ಮಾಡಿರುವ ಬಗ್ಗೆ ಹೊಂದಿರುವ ಅನುಭವ ಹಾಗೂ ಆರ್ಥಿಕ ಸಾಮರ್ಥ್ಯ ಪ್ರಮಾಣ ಪತ್ರ ಗಳನ್ನು ಅನುಬಂಧ 4 ರಲ್ಲಿ ನೀಡಿರುವಂತೆ ಸಲ್ಲಿಸಬೇಕು.
13. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ಸಂಬಂಧಿಸಿದ ವಿಭಾಗದಿಂದ ಪಡೆಯಬಹುದಾಗಿದೆ.
14. ಯಶಸ್ವಿ ಪೂರೈಕೆದಾರರ ಘೋಷಣೆಯಾದ ಎಂಟು ವಾರಗಳ ಅವಧಿಯಲ್ಲಿ, ವಿಫಲವಾದ ಎಲ್ಲಾ ಪೂರೈಕೆದಾರರ ಇ.ಎಂ.ಡಿ.ಯನ್ನು ಹಿಂದಿರುಗಿಸಲಾಗುವುದು. ಯಶಸ್ವಿ ಪೂರೈಕೆದಾರರು ಸಲ್ಲಿಸಿದ ಇ.ಎಂ.ಡಿ. ಯನ್ನು , ಕಾರ್ಯನಿರ್ವಾಹಕ ಭದ್ರತೆಯಾಗಿ ಪರಿಗಣಿಸಿ, ಪೂರೈಕೆಯ ಅವಧಿ ಪೂರ್ಣಗೊಂಡ ನಂತರ ಬಿಡುಗಡೆಗೊಳಿಸಲಾಗುವುದು.
15. ಪ್ರತಿ ಕೊಟೇಶನ್ ಕೆಳ ಕಾಣಿಸಿದ ಮಾಹಿತಿಗಳನ್ನು ಹೊಂದಿರಬೇಕು.
    a. ಇ.ಎಂ.ಡಿ. ಪಾವತಿಸಿದ ಬಗ್ಗೆ ರಶೀದಿ
    b. ಅನುಬಂಧ 5 ರಲ್ಲಿ ಕೊಟ್ಟಿರುವ ನಮೂನೆಯಲ್ಲಿ ಕ್ರಿಮಿನಾಶಕಗಳಿಗೆ ಹಣಕಾಸಿನ ದರ ಪ್ರಸ್ತಾಪ.
    c. ಇ.ಎಂ.ಡಿ. ಸಲ್ಲಿಸಿದ ಬಗ್ಗೆ ರಶೀದಿ

18. ಕೊಟೇಶನ್‌ಗಳ ಮೂಲ & ನಕಲು ಪ್ರತಿ ಎರಡನ್ನು ಬರಳಚ್ಚು ಮಾಡಿರಬೇಕು ಅಥವಾ ಅಳಿಸಲಾಗದ ಶಾಯಿಯಲ್ಲಿ ಬರೆದಿರಬೇಕು ಮತ್ತು

ಪ್ರತಿ ಪುಟದಲ್ಲೂ ಸಂದರ್ಭಕ್ಕೆ ಅನ್ವಯಿಸುವಂತೆ ಬಿಡ್ಡರ್‌ನ ಅಧಿಕೃತ ಕಕ್ಷಿ ಅಥವಾ ಏಕವ್ಯಕ್ತಿ, ಚಿಕ್ಕ ಸಹಿ ಮಾಡಿರಬೇಕು. ಕೊಟೇಶನ್‌ನಲ್ಲಿ

ಮಾಡುವ ಎಲ್ಲಾ ಬದಲಾವಣೆಗಳು, ಸೇರ್ಪಡೆಗಳು, ತೆಗೆದುಹಾಕಿದ ಅಥವಾ ಇನ್ನಿತರ ತಿದ್ದುಪಡಿಗಳಿಗೆ, ಕೊಟೇಶನ್ ಸಹಿ ಮಾಡುವವರಿಂದ ಚಿಕ್ಕ ಸಹಿ ಮಾಡಲ್ಪಟ್ಟಿರಬೇಕು

.

**19 ಕೊಟೇಶನ್‌ನ್ನು ಗುರುತು ಮಾಡುವುದು ಮತ್ತು ಸೀಲ್ ಮಾಡುವುದು.**

(ಅ) ಲಕೋಟೆಯ ಮೇಲೆ, ಕೆಳ ತಿಳಿಸಿದ ಮಾಹಿತಿಯನ್ನು ಬರೆದಿರಬೇಕು.

a. ಪೂರೈಕೆದಾರರ ಹೆಸರು ಮತ್ತು ವಿಳಾಸ

b. ಸಂಪರ್ಕಿಸಬೇಕಾದ ವ್ಯಕ್ತಿ ಮತ್ತು ದೂರವಾಣಿ ಸಂಖ್ಯೆಗಳು

c. ಮೇಲಿನ ಎಡ ಮೂಲೆಯಲ್ಲಿ ("ಕ್ರಿಮಿನಾಶಕಗಳ ವಾರ್ಷಿಕ ಪೂರೈಕೆ ಯೋಜನೆಗಾಗಿ ಕೊಟೇಶನ್")

d. ಟೆಂಡರ್ ಮೌಲ್ಯಮಾಪನ ಸಮಿತಿಯ ಉಪಸ್ಥಿತಿಯಲ್ಲಿ ಮಾತ್ರ ತೆರೆಯಬೇಕು.

(ಬ) ಮೇಲೆ ತಿಳಿಸಿರುವಂತೆ, ಲಕೋಟೆಯನ್ನು ಸೀಲ್ ಮತ್ತು ಗುರುತು ಮಾಡದಿದ್ದ ಪಕ್ಷದಲ್ಲಿ, ಸಲ್ಲಿಸಿದ ಕೊಟೇಶನ್ ಕಳೆದುಹೋದರೆ ಅಥವಾ ಸಲ್ಲಿಸಿದ ಕೊಟೇಷನ್‌ನಲ್ಲಿನ ವಿವರಗಳು ಅಕಾಲಿಕವಾಗಿ ತೆರೆಯಲ್ಪಡುವುದರ ಬಗ್ಗೆ ಖರೀದಿದಾರರು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ ಮತ್ತು ಅಂತಹ ಕೊಟೇಶನ್‌ಗಳನ್ನು ಖರೀದಿದಾರರು ತಮ್ಮ ಸ್ವಂತ ವಿವೇಚನೆಯಲ್ಲಿ ತಿರಸ್ಕರಿಸಬಹುದು.

(ಕ) ಒಂದು ವೇಳೆ ಕೊಟೇಶನ್ ನ್ಯೂನವೆಂದು ಕಂಡು ಬಂದರೆ ಖರೀದಿದಾರರು, ಪೂರೈಕೆದಾರರಿಗೆ ಸಲ್ಲಿಸಿದ ಕೊಟೇಶನ್‌ನ್ನು ಮಾರ್ಪಡಿಸಲು ಕೋರಬಹುದಾಗಿದೆ. ಕೊಟೇಶನ್ ಮೌಲ್ಯ ಮಾಪನ ಮಾಡುವ ಅಂಗವಾಗಿ ಪೂರೈಕೆದಾರರಿಗೆ ಖರೀದಿದಾರರು ಸ್ಪಷ್ಟೀಕರಣ ಸಲ್ಲಿಸಲು ಕೋರಬಹುದಾಗಿದೆ.

(ಡ) ಕ್ರಿಮಿನಾಶಕಗಳಿಗೆ ತಮ್ಮ ಕನಿಷ್ಟ ದರ ಪ್ರಸ್ತಾಪಿಸುವ, ಪೂರೈಕೆದಾರರನ್ನು ಪರಿಗಣಿತ ಪೂರೈಕೆ ದಾರರೆಂದು ಘೋಷಿಸಲಾಗುವುದು.

(ಜ) ಖರೀದಿದಾರರು, ಪರಿಗಣಿತ ಪೂರೈಕೆದಾರರ ಕೊಟೇಶನ್‌ನ್ನು ಒಪ್ಪಿಕೊಳ್ಳಬಹುದು ಅಥವಾ ಅವರನ್ನು ಸಂಧಾನಕ್ಕಾಗಿ ಅಹ್ವಾನಿಸಬಹುದು.

(ಇ) ಇಬ್ಬರು ಅಥವಾ ಹೆಚ್ಚಿನ ಪೂರೈಕೆದಾರರು ಒಂದೇ ಬೆಲೆಯನ್ನು ಉಲ್ಲೇಖಿಸಿದ್ದ ಸಂದರ್ಭದಲ್ಲಿ, ಖರೀದಿದಾರರು ಆ ಎಲ್ಲಾ ಪೂರೈಕೆದಾರರನ್ನು ಸಂಧಾನಕ್ಕಾಗಿ ಅಹ್ವಾನಿಸಬಹುದು ಮತ್ತು ಸಂಧಾನದ ಫಲಶೃತಿಯ ರೀತ್ಯಾ ಪರಿಗಣಿತ ಪೂರೈಕೆದಾರರನ್ನು ಆಯ್ಕೆ ಮಾಡಬಹುದು. ಅಂತಹ ಸಂದರ್ಭಗಳಲ್ಲಿ ಆಯ್ಕೆಯು ಖರೀದಿದಾರರ ಸ್ವಂತ ವಿವೇಚನೆಯಂತೆ ನಡೆಯುತ್ತದೆ.

**20.** ಸಂಧಾನದಿಂದ ಅಥವಾ ಸಂಧಾನವಿಲ್ಲದೆ, ಪರಿಗಣಿತ ಪೂರೈಕೆದಾರರನ್ನು ಅಂಗೀಕರಿಸಿದಲ್ಲಿ ಖರೀದಿದಾರರು, ಪರಿಗಣಿತ ಪೂರೈಕೆದಾರರನ್ನು ಯಶಸ್ವಿ ಪೂರೈಕೆದಾರರೆಂದು ಘೋಷಿಸುವರು. ಖರೀದಿದಾರರು, ಪೂರೈಕೆದಾರರ ಕೋಟೇಶನ್‌ನ್ನು ಒಪ್ಪಿರುವುದನ್ನು ದಯಾಪಾಲಿಕ ಪತ್ರ (LoA) ಕಾರ್ಯದೇಶ ನೀಡುವ ಮೂಲಕ ಸೂಚಿಸುವರು.

21. ಈ ಖರೀದಿ ದಸ್ತಾವೇಜಿನಲ್ಲಿ ಇರುವ ಯಾವುದರೊಂದಾಗ್ಯೂ ಖರೀದಿದಾರರು ಯಾವುದೇ ಸಮಯದಲ್ಲಿ, ಯಾವುದೇ ಕಾರಣಗಳನ್ನು ನೀಡದೆ ಕೊಟೇಶನ್‌ಗಳನ್ನು ತಿರಸ್ಕರಿಸುವುದಕ್ಕೆ ಅಥವಾ ಪ್ರಕ್ರಿಯೆಯನ್ನು ರದ್ದುಪಡಿಸುವ ಜವಾಬ್ದಾರಿ ಅಥವಾ ಕಟ್ಟುಪಾಡುಗಳಿಗೆ ಒಳಗಾಗದೆ ಯಾವುದೇ ಕೊಟೇಶನ್‌ನ್ನು ಒಪ್ಪುವ ಅಥವಾ ತರಸ್ಕರಿಸುವ್ರದಕ್ಕೆ ಅಥವಾ ಯಾವುದೇ ಅಥವಾಬಿಡ್ಡಿಂಗ್ ಪ್ರಕ್ರಿಯೆಯನ್ನು ರದ್ದುಪಡಿಸುವ ಅಥವಾ ಎಲ್ಲಾ ಕೊಟೇಶನ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದ್ದಾರೆ .

ಅನುಬಂಧ 1

## ಪೂರೈಕೆದಾರರ ವಿವರಗಳು
## (ಪೂರೈಕೆದಾರರ ಶೀರ್ಷಿಕೆ ಹಾಳೆಯಲ್ಲಿ)

1. a. ಪೂರೈಕೆದಾರರ ಹೆಸರು
   b. ಕಛೇರಿಯ ವಿಳಾಸ (ಗಳು)
   c. ಸ್ಥಾಪನೆ ದಿನಾಂಕ ಮತ್ತು / ಅಥವಾ ವಹಿವಾಟು ಆರಂಭಿಸಿದ ದಿನಾಂಕ

2. ಪೂರೈಕೆದಾರರ ಮುಖ್ಯ ವಹಿವಾಟಿನ ಸಂಕ್ಷಿಪ್ತ ವಿವರಣೆ

3. ಸ್ಥಳೀಯ ಸಂಸ್ಥೆಗೆ ಪೂರೈಕೆದಾರರನ್ನು ಸಂಪರ್ಕಿಸಲು, ಸಂಪರ್ಕ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುವ ವ್ಯಕ್ತಿಯ (ಗಳ) ವಿವರಗಳು)
   a) ಹೆಸರು :
   b) ಪದನಾಮ :
   c) ಕಂಪನಿ / ಸಂಸ್ಥೆ :
   d) ವಿಳಾಸ :
   e) ದೂರವಾಣಿ ಸಂಖ್ಯೆ :
   f) ಇ–ಮೇಲ್ ವಿಳಾಸ :
   g) ಫ್ಯಾಕ್ಸ್ ಸಂಖ್ಯೆ :
   h) ಮೊಬೈಲ್ ಸಂಖ್ಯೆ :

4. ಇ.ಎಂ.ಡಿ ವಿವರಗಳು:
   ಇ.ಎಂ.ಡಿ. ಮೊತ್ತ: ರೂ.________________
   ಬ್ಯಾಂಕ್ ಹೆಸರು :___________________
   ಡಿ.ಡಿ / ಚಲನ್ ಸಂಖ್ಯೆ & ದಿನಾಂಕ : ________________________

5. ಕೆ.ಎಸ್.ಟಿ. ನಂ.______________

6. ಸಿ.ಎಸ್.ಟಿ. ನಂ.______________

**ಅನುಬಂಧ ः 2**

**ಮುಖ ಪತ್ರ 4**
**(ಬಿಡ್ಡರ್‌ಗಳ ಲೆಟರ್ ಹೆಡ್‌ನಲ್ಲಿ)**

ದಿನಾಂಕ:

ಗೆ: *ಪೌರಾಯುಕ್ತರು, ನಗರಸಭೆ, ಹರಿಹರ*

ವಿಷಯ: ನೈರ್ಮಲ್ಯ ಕಾರ್ಯಗಳಿಗೆ ಅಗತ್ಯವಿರುವ ಕ್ರಿಮಿನಾಶಕ ಸರಬರಾಜು ಮಾಡುವ ಬಗ್ಗೆ
ಉಲ್ಲೇಖ: ನಿಮ್ಮ ಅಧಿಸೂಚನೆ ಸಂಖ್ಯೆ: ______________________________, ದಿನಾಂಕ ______

ಮಾನ್ಯರೇ,

--------- (ಬಿಡ್ಡರ್ ಎಂದು ಕರೆಯಲ್ಪಡುವ) ಪರವಾಗಿ ಕಾರ್ಯ ನಿರ್ವಹಿಸಲು ಅಧಿಕೃತವಾಗಿ ನಿಯೋಜಿತವಾಗಿರುವ, ಪ್ರಸ್ತಾವನೆಯಲ್ಲಿರುವ ಅವಶ್ಯಕತೆಗಳು ಹಾಗೂ ನೀಡಲ್ಪಟ್ಟ ಮತ್ತು ಸಂಗ್ರಹಿಸಿದ ಮಾಹಿತಿಯನ್ನು ಪರೀಶೀಲಿಸಿ, ಸಂಪೂರ್ಣ ಅರ್ಥ ಮಾಡಿಕೊಂಡು, ಕೆಳಗೆ ಸಹಿ ಮಾಡಿರುವ, ಸಹಿದಾರನಾದ ನಾನು (ಬಿಡ್ಡರ್‌ನ ಹೆಸರು) ರ ಪರವಾಗಿ ಪ್ರಸ್ತಾವನೆಯನ್ನು, ಯೋಜನೆಗಾಗಿ, ಪ್ರಸ್ತಾವನೆಗಾಗಿ ಬೇಡಿಕೆಯಲ್ಲಿ ಅಗತ್ಯವಿರುವಂತೆ, ಒಂದು (1) ಮೂಲ ಪ್ರತಿ ಮತ್ತು ಒಂದು (1) ನಕಲು ಪ್ರತಿಯನ್ನು ಅಗತ್ಯ ಮಾಹಿತಿಗಳೊಂದಿಗೆ, ನಿಮ್ಮ ಮೌಲ್ಯ ಮಾಪನಕ್ಕಾಗಿ ಸಲ್ಲಿಸುತ್ತೇನೆ.

*[ಪ್ರಸ್ತಾವನೆಯ ನಿಗದಿತ ದಿನಾಂಕವನ್ನು ಸೇರಿಸಿ]* ರಿಂದ ಆರು ಕ್ಯಾಲೆಂಡರ್ ತಿಂಗಳುಗಳ ಕಾಲ ನಮ್ಮ ಪ್ರಸ್ತಾವನೆಯು ಸಿಂಧುವಾಗಿರುವುದೆಂದು ತಿಳಿಯ ಪಡಿಸುತ್ತೇವೆ.

ನಿಮ್ಮ ವಿಶ್ವಾಸಿ,
*[ಬಿಡ್ಡರ್‌ನ ಹೆಸರು]* ರ ಪರವಾಗಿ

ಬಿಡ್ಡರ್‌ದಾರರ ಅಧಿಕೃತ ಸಹಿದಾರರ ಸಹಿ
*[ಅಧಿಕೃತ ಸಹಿದಾರರ ಹೆಸರು, ಪದನಾಮ ಮತ್ತು ವಿಳಾಸ]*

ಅನುಬಂಧ– 3

## ಒಳಸಂಚು ನಿರೋಧ ಪ್ರಮಾಣ ಪತ್ರದ ನಮೂನೆ

ನಾನು / ನಾವು ಮೇಲಿನ ಗುತ್ತಿಗೆಗೆ ಸ್ಪರ್ಧಿಸುವಾಗ (ಮತ್ತು, ಕಾರ್ಯಾಚರಿಸಲು ಆದೇಶ ನೀಡಿದಲ್ಲಿ), ನಾನು / ನಾವು ಭಾರತದಲ್ಲಿ ಚಾಲನೆಯಲ್ಲಿರುವ ಮೋಸ ಮತ್ತು ಭ್ರಷ್ಟಾಚಾರದ ವಿರುದ್ಧದ ಕಾನೂನಾದ "ಭ್ರಷ್ಟಾಚಾರ ತಡೆಯುವ ಕಾಯ್ದೆ 1988" ನ್ನು ಗಮನಿಸುತ್ತೇನೆ (ವೆ) ಎಂದು ದೃಢೀಕರಿಸುತ್ತೇನೆ.

ನಾನು / ನಾವು ನಮ್ಮ ಪ್ರಸ್ತಾವನೆಯನ್ನು ತಯಾರಿಸಿ ಮತ್ತು ಸಲ್ಲಿಸುವಾಗ ಬೇರೆ ಬಿಡ್ಡರ್ ಅಥವಾ ಬೇರೆ ವ್ಯಕ್ತಿ (ಗಳ) ಒಡನೆ ಒಳಸಂಚು ಅಥವಾ ಗೋಷ್ಟಿಗಳಲ್ಲಿ ಪಾಲ್ಗೊಂಡಿಲ್ಲ ಮತ್ತು ಸ್ಪರ್ಧಾತ್ಮಕ ವಿರೋಧ ಕಾರ್ಯಗಳೆಂದು ಪರಿಗಣಿಸುವ ಕಾರ್ಯಗಳನ್ನು ಮಾಡಿಲ್ಲವೆಂದು ಪ್ರಮಾಣ ನೀಡುತ್ತೇನೆ (ವೆ) ಮತ್ತು ದೃಢೀಕರಿಸುತ್ತೇನೆ (ವೆ).

ನಾನು / ನಾವು ಈಗಿನ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ ಅಥವಾ ಏಜೆನ್ಸಿಗೆ ಯಾವುದೇ ಕಾನೂನು ಬಾಹಿರ ಲಂಚವನ್ನು ಹಣ ಅಥವಾ ಬೇರೆ ರೀತಿಯಲ್ಲಿ ನೀಡಿಲ್ಲ ಅಥವಾ ನೀಡುವುದಿಲ್ಲ ಎಂದು ದೃಢೀಕರಿಸುತ್ತೇನೆ (ವೆ),

2009ನೇ ಜೂನ್ ತಿಂಗಳಿನ -------- ದಿನ.

*ಬಿಡ್ಡರ್‌ನ ಪರವಾಗಿ*

*[ಬಿಡ್ಡರ್ / ಅಧಿಕೃತ ವ್ಯಕ್ತಿಯ ಹೆಸರು ಮತ್ತು ಸಹಿ]*

**ಅನುಬಂಧ 4**

## ಅರ್ಹತೆಯ ರುಜುವಾತು

**A. ಅರ್ಹತೆಯ ಮಾನದಂಡಗಳು**

ಬಿಡ್ಡರನು ಕೆಳಕಾಣಿಸಿದಂತೆ, ಆಯ್ಕೆಗೆ ಯೋಗ್ಯವಾದ ಅನುಭವದ ವಿವರಗಳನ್ನು ಒದಗಿಸಬೇಕು.

| ಕ್ರ ಸಂ | ಅರ್ಹತೆಯ ಮಾನದಂಡ | ಅಂಶ |
|---|---|---|
| 1 | ಟೆಂಡರ್ ದಸ್ತಾವೇಜಿನಲ್ಲಿ ನಮೂದಿಸಿದ ಕ್ರಿಮಿನಾಶಕಗಳ ಅಧಿಕೃತ ತಯಾರಕರಾಗಿದ್ದಲ್ಲಿ | ➢ ಕ್ರಿಮಿನಾಶಕಗಳ ತಯಾರಿಕೆಯಲ್ಲಿ ಕನಿಷ್ಟ 2 ವರ್ಷಗಳ ಅನುಭವ |
| 2 | ಕ್ರಿಮಿನಾಶಕಗಳ ಅಧಿಕೃತ ಸರಬರಾಜುದಾರರಿದ್ದಲ್ಲಿ | ➢ ಕ್ರಿಮಿನಾಶಕ ಸರಬರಾಜು ಪಡೆದ ಸ್ಥಳೀಯ ಸಂಸ್ಥೆಗಳಿಂದ ಪ್ರಮಾಣಪತ್ರ |
| 3 | 1) ಇತ್ತೀಚಿನ ಆರ್ಥಿಕ ವರ್ಷದಲ್ಲಿ ಕೊನೆಯಲ್ಲಿ ನಿವ್ವಳ ಆಸ್ಥಿ ಮೌಲ್ಯ (ನೆಟ್ ವರ್ಥ್) ರೂ 5.00 ಲಕ್ಷ ಅಥವಾ<br>2) ಕಳೆದ ಎರಡು ಆರ್ಥಿಕ ವರ್ಷಗಳ ಸರಾಸರಿ ನಿವ್ವಳ ಹಣ (ನೆಟ್ ಕ್ಯಾಷ್ ಅಕ್ರುಯಲ್ಸ್) ರೂ 2.5.00 ಲಕ್ಷ ಅಥವಾ<br>3) ರೂ 5.00 ಲಕ್ಷಗಳಿಗೆ ಸಾಲ ತೀರಿಸುವ ಶಕ್ತಿ ಪ್ರಮಾಣ ಪತ್ರವನ್ನು ಯಾವುದೇ ನೊಂದಾಯಿತ ಲೆಕ್ಕಪರಿಶೋಧಕರಿಂದ ಅಥವಾ ಷೆಡ್ಯೂಲ್ಡ್ ಬ್ಯಾಂಕಿನಿಂದ ಪಡೆದು ಸಲ್ಲಿಸುವುದು | |

**ಉಪ ಟಿಪ್ಪಣಿ**

a) ಬಿಡ್ಡರನು ತಮ್ಮ ಸ್ವಂತ ಹಣಕಾಸಿನ ಹೇಳಿಕೆಗಳ ಆಧಾರದ ಮೇಲೆ ಹಣಕಾಸಿನ ಸಾಮರ್ಥ್ಯವನ್ನು ತಿಳಿಸಬೇಕು. ಪೂರೈಕೆದಾರರ ಮಾತೃ ಸಂಸ್ಥೆ ಅಥವಾ ಅದರ ಉಪಸಂಸ್ಥೆ ಅಥವಾ ಯಾವುದೇ ಸಹಯೋಗಿ ಕಂಪನಿಗಳ ಹಣಕಾಸಿನ ಸಾಮರ್ಥ್ಯವನ್ನು, ಪೂರೈಕೆದಾರರ ಹಣಕಾಸಿನ ಸಾಮರ್ಥ್ಯವನ್ನು ಲೆಕ್ಕ ಹಾಕುವಾಗ ಪರಿಗಣಿಸಲಾಗುವುದಿಲ್ಲ.

b) ನೆಟ್ ವರ್ಥ್ = (ಸಬ್‌ಸ್ಕ್ರೈಬ್ಡ್ ಮತ್ತು ಪೈಡ್ ಅಪ್ ಇಕ್ವಿಟಿ + ರಿಸರ್ವ್ಸ್) – (ರಿವ್ಯಾಲ್ಯುಯೆಶನ್ ರಿಸರ್ವ್ಸ್ + ರಿಟನ್ ಆಫ್ ಮಾಡದ ಇತರೆ ವೆಚ್ಚಗಳು)

c) ನೆಟ್ ಕ್ಯಾಷ್ ಅಕ್ರುಯಲ್ಸ್ = (ತೆರಿಗೆನಂತರದ ಲಾಭ+ ಸವಕಳಿ+ ನಾನ್‌ಕ್ಯಾಷ್ ವೆಚ್ಚಗಳು)

d) ನೆಟ್ ವರ್ಥ್ ಮತ್ತು ನೆಟ್ ಕ್ಯಾಷ್ ಅಕ್ರುಯಲ್ಸ್‌ಗಳು. ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯು ನೀಡಿರುವ ಪ್ರಕಟಣೆಯಲ್ಲಿ ಹಣಕಾಸು ಸಾಮರ್ಥ್ಯದ ಬಗ್ಗೆ ನೀಡಿರುವ ಮಾರ್ಗದರ್ಶನದಂತೆ ಇರಬೇಕು.

ಬಿಡ್ಡರನು ಅನುಭವದ ವಿವರಗಳನ್ನು ಪುಷ್ಠೀಕರಿಸುವ ದಾಖಲಾತಿಗಳೊಡನೆ ಕೆಳಗೆ ಕೊಟ್ಟಿರುವ ಚೌಕಟ್ಟಿನಲ್ಲಿ ಸಲ್ಲಿಸಬೇಕು.

| ಅನುಭವದ ಪ್ರಮಾಣಗಳು | | ಪುಷ್ಠೀಕರಿಸುವ ದಾಖಲೆಗಳು |
|---|---|---|
| ಹಣಕಾಸಿನ ಸಾಮರ್ಥ್ಯ | • ಹಣಕಾಸಿನ ವರ್ಷ 05–06 ರಲ್ಲಿ ನೆಟ್‌ವರ್ಥ್ ಲಕ್ಷ ರೂ ---<br>• ಹಣಕಾಸಿನ ವರ್ಷ 06–07 ರಲ್ಲಿ ನೆಟ್‌ವರ್ಥ್ ಲಕ್ಷ ರೂ ---<br>• ಹಣಕಾಸಿನ ವರ್ಷ 05–06 ರಲ್ಲಿ ನೆಟ್ ಕ್ಯಾಷ್ ಅಕ್ಯುರಲ್ಸ್ ಲಕ್ಷ ರೂ ----<br>• ಹಣಕಾಸಿನ ವರ್ಷ 06–07 ರಲ್ಲಿ ನೆಟ್ ಕ್ಯಾಷ್ ಅಕ್ಯುರಲ್ಸ್ ಲಕ್ಷ ರೂ --- | • ಚಾರ್ಟರ್ಡ್ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ನೆಟ್ ವರ್ಥ್ ಹೇಳಿಕೆ<br>• ಚಾರ್ಟರ್ಡ್ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ನಟ್ ಕ್ಯಾಷ್ ಅಕ್ರುಯಲ್ಸ್ ಲೆಕ್ಕಾಚಾರಗಳು |

ಅನುಬಂಧ 5

# ನೈರ್ಮಲ್ಯ ರಕ್ಷಣೆಗಾಗಿ ಕ್ರಿಮಿನಾಶಕ ಪೂರೈಸುವ ಕುರಿತು

ಹಣಕಾಸಿನ ಕೊಟೇಶನ್ (ಮೂಲ ಪ್ರತಿ)

ಗೆ,

ಪೌರಾಯುಕ್ತರು,
ನಗರಸಭೆ, ಹರಿಹರ.

ಮಾನ್ಯರೇ,

ವಿಷಯ:– ನೈರ್ಮಲ್ಯ ರಕ್ಷಣೆಗಾಗಿ ಕ್ರಿಮಿನಾಶಕಗಳನ್ನು ಪೂರೈಸುವ ಕುರಿತು.

ಉಲ್ಲೇಖ: ನಿಮ್ಮ ಪ್ರಕಟಣೆ ಸಂಖ್ಯೆ ____________________________ ದಿನಾಂಕ:____________

–0–

| ಕ್ರ.ಸಂ. | ಕ್ರಿಮಿನಾಶಕಗಳ ವಿವರ | | ಪ್ರಸ್ತಾಪಿಸಿದ ದರ (ಮೊತ್ತ ರೂಪಾಯಿಗಳಲ್ಲಿ) | |
|---|---|---|---|---|
| | | | (ಅಂಕಿಗಳಲ್ಲಿ) | (ಪದಗಳಲ್ಲಿ) |
| 1 | ಮೆಲ್ಯಾಥಿಯನ್ ಪೌಡರ್ 5% (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಕ್ವಿಂಟಾಲ್‌ಗೆ | | |
| 2 | ಬೈಟೆಕ್ಸ್ 1000.ಇ.ಸಿ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಲೀಟರ್‌ಗೆ | | |
| 3 | ಪೈರೋಸೀನ್ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಕ್ವಿಂಟಾಲ್‌ಗೆ | | |
| 4 | ಬ್ಲ್ಯಾಕ್ ಫೆನಾಯಿಲ್ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಲೀಟರ್‌ಗೆ | | |
| 5 | ಕಿಂಗ್‌ಫಾಗ್ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಲೀಟರ್‌ಗೆ | | |
| 6 | ಮಲೇರಿಯಾ ಆಯಿಲ್ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಲೀಟರ್‌ಗೆ | | |
| 7 | ಟೆಮೋಫಾಸ್ 50% ಇಸಿ. | ಪ್ರತಿ ಲೀಟರ್‌ಗೆ | | |
| 8 | ಫಿಗ್ ಪಾಯ್ಸನ್ | ಪ್ರತಿ ಕೆ.ಜಿ ಗೆ | | |
| 9 | ಡಾಗ್‌ಮಾರ್ ಟ್ಯಾಬ್ಲೆಟ್ಸ್ | ನೂರಕ್ಕೆ | | |
| 10 | ಅಬೇಟ್ | ಪ್ರತಿ ಲೀಟರಿಗೆ | | |

ಮೇಲೆ ಉಲ್ಲೇಖಿಸಲಾದ ಬೆಲೆಯು ಒಟ್ಟು ಮೊತ್ತವಾಗಿದ್ದು, ಎಲ್ಲಾ ತೆರಿಗೆ ಮತ್ತು ಸುಂಕವನ್ನು ಒಳಗೊಂಡಿದೆ. ಸೂಚಿಸಲಾದ ಬೆಲೆಯಲ್ಲಿ ಪ್ಯಾಕಿಂಗ್ ಮತ್ತು ತಲುಪಿಸುವ ವೆಚ್ಚ ಸೇರಿಕೊಂಡಿರುತ್ತದೆ. ಪೂರೈಕೆಯು ಪೂರ್ತಿ ಆಗುವ ಅವಧಿಯವರೆಗೂ ಈ ಬೆಲೆಯು ಸ್ಥಿರವಾಗಿರುತ್ತದೆ ಮತ್ತು ಕಾನೂನಿನ ರೀತ್ಯಾ ಅಗತ್ಯವಾದ ಎಲ್ಲಾ ತೆರಿಗೆ ಹಾಗೂ ಸುಂಕವನ್ನು ಇದು ಒಳಗೊಂಡಿರುತ್ತದೆ.

ದಿನಾಂಕ:

ನಿಮ್ಮ ವಿಧೇಯ,
(ಪೂರೈಕೆದಾರರ ಹೆಸರು) ಅವರ ಪರವಾಗಿ
ಪೂರೈಕೆದಾರರ ಅಧಿಕೃತ ಸಹಿದಾರರಿಂದ ಸಹಿಮಾಡಲ್ಪಟ್ಟಿದೆ
(ಅಧಿಕೃತ ಸಹಿದಾರರ ಹೆಸರು, ಪದನಾಮ ಮತ್ತು ವಿಳಾಸ)

ಪೌರಾಯುಕ್ತರು,
ನಗರಸಭೆ, ಹರಿಹರ.

ಅನುಬಂಧ 5

# ನೈರ್ಮಲ್ಯ ರಕ್ಷಣೆಗಾಗಿ ಕ್ರಿಮಿನಾಶಕ ಪೂರೈಸುವ ಕುರಿತು

ಹಣಕಾಸಿನ ಕೊಟೇಶನ್ ( ನಕಲು ಪ್ರತಿ )

ಗೆ,

ಪೌರಾಯುಕ್ತರು,
ನಗರಸಭೆ, ಹರಿಹರ.

ಮಾನ್ಯರೇ,

ವಿಷಯ:– ನೈರ್ಮಲ್ಯ ರಕ್ಷಣೆಗಾಗಿ ಕ್ರಿಮಿನಾಶಕಗಳನ್ನು ಪೂರೈಸುವ ಕುರಿತು.
ಉಲ್ಲೇಖ: ನಿಮ್ಮ ಪ್ರಕಟಣೆ ಸಂಖ್ಯೆ ________________________ ದಿನಾಂಕ:-----------

–0–

| ಕ್ರ.ಸಂ. | ಕ್ರಿಮಿನಾಶಕಗಳ ವಿವರ | | ಪ್ರಸ್ತಾಪಿಸಿದ ದರ (ಮೊತ್ತ ರೂಪಾಯಿಗಳಲ್ಲಿ) | |
|---|---|---|---|---|
| | | | (ಅಂಕಿಗಳಲ್ಲಿ) | (ಪದಗಳಲ್ಲಿ) |
| 1 | ಮೆಲ್ಯಾಥಿಯನ್ ಪೌಡರ್ 5% (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಕ್ವಿಂಟಾಲ್‌ಗೆ | | |
| 2 | ಬೈಟೆಕ್ಸ್ 1000.ಇ.ಸಿ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಲೀಟರ್‌ಗೆ | | |
| 3 | ಪೈರೋಸೀನ್ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಕ್ವಿಂಟಾಲ್‌ಗೆ | | |
| 4 | ಬ್ಯಾಲ್ಕ್ ಫೆನಾಯಿಲ್ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಲೀಟರ್‌ಗೆ | | |
| 5 | ಕಿಂಗ್‌ಫಾಗ್ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಲೀಟರ್‌ಗೆ | | |
| 6 | ಮಲೇರಿಯಾ ಆಯಿಲ್ (ಐ.ಎಸ್.ಐ.ಗುಣಮಟ್ಟದ್ದು) | ಪ್ರತಿ ಲೀಟರ್‌ಗೆ | | |
| 7 | ಟೆಮೋಫಾಸ್ 50% ಇಸಿ. | ಪ್ರತಿ ಲೀಟರ್‌ಗೆ | | |
| 8 | ಪಿಗ್ ಪಾಯ್ಸನ್ | ಪ್ರತಿ ಕೆ.ಜಿ ಗೆ | | |
| 9 | ಡಾಗ್‌ಮಾರ್ ಟ್ಯಾಬ್ಲೆಟ್ಸ್ | ನೂರಕ್ಕೆ | | |
| 10 | ಅಬೇಟ್ | ಪ್ರತಿ ಲೀಟರಿಗೆ | | |

ಮೇಲೆ ಉಲ್ಲೇಖಿಸಲಾದ ಬೆಲೆಯು ಒಟ್ಟು ಮೊತ್ತವಾಗಿದ್ದು, ಎಲ್ಲಾ ತೆರಿಗೆ ಮತ್ತು ಸುಂಕವನ್ನು ಒಳಗೊಂಡಿದೆ. ಸೂಚಿಸಲಾದ ಬೆಲೆಯಲ್ಲಿ ಪ್ಯಾಕಿಂಗ್ ಮತ್ತು ತಲುಪಿಸುವ ವೆಚ್ಚ ಸೇರಿಕೊಂಡಿರುತ್ತದೆ. ಪೂರೈಕೆಯು ಪೂರ್ತಿ ಆಗುವ ಅವಧಿಯವರೆಗೂ ಈ ಬೆಲೆಯು ಸ್ಥಿರವಾಗಿರುತ್ತದೆ ಮತ್ತು ಕಾನೂನಿನ ರೀತ್ಯಾ ಅಗತ್ಯವಾದ ಎಲ್ಲಾ ತೆರಿಗೆ ಹಾಗೂ ಸುಂಕವನ್ನು ಇದು ಒಳಗೊಂಡಿರುತ್ತದೆ.

ದಿನಾಂಕ:

ನಿಮ್ಮ ವಿಧೇಯ,
ಪೂರೈಕೆದಾರರ ಪರವಾಗಿ

(ಅಧಿಕೃತ ಸಹಿದಾರರ ಹೆಸರು, ಪದನಾಮ ಮತ್ತು ವಿಳಾಸ)

ಪೌರಾಯುಕ್ತರು,
ನಗರಸಭೆ, ಹರಿಹರ.

## ಒಪ್ಪಂದ

*ನಗರಸಭೆ, ಹರಿಹರ* ಇವರ ಮೂಲಕ ಪ್ರತಿನಿಧಿಸಲ್ಪಟ್ಟದ್ದು (ಇಲ್ಲಿಂದ ಮುಂದೆ ನಗರ ಸ್ಥಳೀಯ ಸಂಸ್ಥೆ ಎಂದು ಕರೆಯಲಾಗುವುದು ಮತ್ತು ಈ ಶಬ್ದ ಪ್ರಯೋಗವು, ಸಂದರ್ಭದಲ್ಲಿ ತೆಗೆದುಹಾಕದಿದ್ದ ಮತ್ತು ಸಂದರ್ಭಕ್ಕೆ ವಿರೋಧವಾಗಿರದ ಪಕ್ಷದಲ್ಲಿ, ಅದರ ವಾರಸುದಾರರು ಮತ್ತು ಒಪ್ಪಿತ ಪ್ರತಿನಿಧಿಗಳು ಸೇರಿರುತ್ತಾರೆಂದು ಪರಿಗಣಿಸಲಾಗುವುದು); **ಒಂದು ಭಾಗ**

**ಮತ್ತು**

*[ಆಯ್ಕೆಯಾದ ಬಿಡ್ಡರ್‌ನ ಹೆಸರು ಮತ್ತು ನೋಂದಾಯಿತ ಕಛೇರಿಯ [2] ವಿಳಾಸವನ್ನು ಸೇರಿಸಿ]*, (ಇಲ್ಲಿಂದ ಮುಂದೆ "ಸೇವೆ ಒದಗಿಸುವವರು" ಎಂದು ಕರೆಯಲಾಗುವುದು ಮತ್ತು ಈ ಶಬ್ದ ಪ್ರಯೋಗವು ಸಂದರ್ಭದಲ್ಲಿ ತೆಗೆದುಹಾಕದಿದ್ದ ಅಥವಾ ವಿರೋಧವಾಗಿರದ ಪಕ್ಷದಲ್ಲಿ, ಅದರ ವಾರಸುದಾರರು ಮತ್ತು ಒಪ್ಪಿತ ಪ್ರತಿನಿಧಿಗಳು ಸೇರಿರುತ್ತಾರೆ ಎಂದು ಪರಿಗಣಿಸಲಾಗುವುದು);
**ಮತ್ತೊಂದು ಭಾಗ**

**ಇವರ ನಡುವೆ**

*2009*ರ, ಜೂನ್ ತಿಂಗಳ, ______ ದಿವಸದಂದು *ಒಂದು ವರ್ಷದ ಅವಧಿಗೆ ಹರಿಹರದ*ಲ್ಲಿ, ಏರ್ಪಟ್ಟ ಒಪ್ಪಂದ (ಕರಾರು)

**ಅಂದರೆ:**

A 1964ರ ಕರ್ನಾಟಕ ಪುರಸಭೆಗಳ ಅಧಿನಿಯಮದಡಿಯಲ್ಲಿ ನಗರ ನೈರ್ಮಲೀಕರಣವು. ನಗರ ಸ್ಥಳೀಯ ಸಂಸ್ಥೆಯ ಕಡ್ಡಾಯ ಕಾರ್ಯವಾಗಿರುತ್ತದೆ ಮತ್ತು ಈ ಕಾರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಯು ಈಗ ನಿರ್ವಹಿಸುತ್ತಿದೆ.

B ನಗರ ಸ್ಥಳೀಯ ಸಂಸ್ಥೆಯು ಸಾರ್ವಜನಿಕ ಆರೋಗ್ಯ ರಕ್ಷಣೆಗಾಗಿ, ಅಂಟು ಜಾಡ್ಯಗಳನ್ನು ತಡೆಗಟ್ಟುವ ಸಲುವಾಗಿ ಅಗತ್ಯ ಕ್ರಿಮಿನಾಶಕಗಳನ್ನು ಖರೀದಿ ಮಾಡುವ ಉದ್ದೇಶಕ್ಕಾಗಿ ಅರ್ಹ ಕ್ರಿಮಿನಾಶಕ ಪೂರೈಕೆದಾರರು/ತಯಾರಕರುಗಳಿಂದ ಸ್ಪರ್ಧಾತ್ಮಕ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ (ಇನ್ನುಮುಂದೆ '**ಯೋಜನೆ**' ಎಂದು ಕರೆಯಲಾಗುವುದು):

C ಇದಕ್ಕೆ ಉತ್ತರವಾಗಿ, ನಗರ ಸ್ಥಳೀಯ ಸಂಸ್ಥೆಯು ಅನೇಕ ಬಿಡ್ಡರ್‌ಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಿರುತ್ತದೆ ಮತ್ತು ಸೇವೆ ಒದಗಿಸುವವರು ಸಲ್ಲಿಸಿದ ಪ್ರಸ್ತಾವನೆಯನ್ನು ಮೌಲ್ಯಮಾಪನದ ನಂತರ ಒಪ್ಪಿಕೊಂಡಿರುತ್ತದೆ.

D ನಗರ ಸ್ಥಳೀಯ ಸಂಸ್ಥೆಯು ಯೋಜನೆಯ ಅನುಷ್ಠಾನಕ್ಕಾಗಿ ಸೇವೆ ಒದಗಿಸುವವರಿಗೆ, ಒಪ್ಪಂದದ (ಕರಾರಿನ) ನಿಯಮ, ನಿಬಂಧನೆಗೆ ಒಳಪಟ್ಟು ಮೇಲೆ ತಿಳಿಸಿದ ಯೋಜನೆಯನ್ನು ನೆರವೇರಿಸಲು ಅಧಿಕಾರವನ್ನು ನೀಡುತ್ತದೆ.

---

**ಮೇಲ್ಕಂಡ ಕಾರಣಗಳನ್ವಯ ಈ ಒಪ್ಪಂದವನ್ನು ಕೆಳಕಂಡ ರೀತಿಯಲ್ಲಿ ಸಾಕ್ಷೀಕರಿಸಲಾಗಿದೆ**

## ಅನುಚ್ಛೇದ – 1

## ವ್ಯಾಖ್ಯಾನಗಳು ಮತ್ತು ಅರ್ಥ ವಿವರಣೆ

### 1.1 ವ್ಯಾಖ್ಯಾನಗಳು

ಈ ಒಪ್ಪಂದದಲ್ಲಿ, ಇಲ್ಲಿನ ಸಂದರ್ಭ ಅಥವಾ ಅರ್ಥ ವಿರೋಧವಾಗಿರದಿದ್ದಲ್ಲಿ, ಇಲ್ಲಿ ತಿಳಿಸಿರುವ, ಶಬ್ದಗಳು ಮತ್ತು ಭಾವಗಳು, ಕೆಳಗೆ ನೀಡಿರುವ ಅರ್ಥವನ್ನು ಕ್ರಮವಾಗಿ ಹೊಂದಿರುತ್ತವೆ.

"ಒಪ್ಪಂದ" ಅಂದರೆ ಈ ಒಪ್ಪಂದ ಮತ್ತು ಇದರ ಪ್ರಾವಿಧಾನಗಳ ಅನುಸಾರ ಈ ಒಪ್ಪಂದಕ್ಕೆ ಮಾಡಲಾಗುವ ತಿದ್ದುಪಡಿಗಳು ಸೇರಿರುತ್ತವೆ.

"ಅನ್ವಯಿಸುವ ಕಾನೂನು" ಅಂದರೆ ಎಲ್ಲಾ ರೀತಿಯ ಹಾಗೂ ಈ ದಿನಾಂಕದಿಂದ ಭಾರತದಲ್ಲಿ ಅನ್ವಯಿಸುವಂತೆ ಹಾಗೂ ಜಾರಿ ಬರುವಂತೆ ಈ ಒಪ್ಪಂದವು ಅಸ್ತಿತ್ವದಲ್ಲಿರುವವರಿಗೂ ಎಲ್ಲಾ ಹಾಗೂ ಘೋಷಣೆಯಾಗಬಹುದಾದಂತ ನ್ಯಾಯಲಯದ ತೀರ್ಪು, ಡಿಕ್ರಿ, ನಿರ್ಬಂಧಕಾಜ್ಞೆ, ಮೇಲ್ಮನವಿ ಅಥವಾ ಆದೇಶಗಳು ಈ ಯೋಜನೆಗೆ / ಸೇವೆ ಸಲ್ಲಿಸುವವರಿಗೆ ಅನ್ವಯಿಸುತ್ತದೆ.

"ಅನ್ವಯಿಸುವ ಪರವಾನಿಗೆಗಳು" ಒಪ್ಪಂದದ ಅವಧಿಯಲ್ಲಿ ಯೋಜನೆಯ ಸಂಬಂಧ, ಸೇವೆ ಒದಗಿಸುವವರು ಅನ್ವಯಿಸುವ ಕಾನೂನಿನ ಅಡಿಯಲ್ಲಿ ಪಡೆದುಕೊಳ್ಳಬೇಕಾದ, ಹೊಂದಿರಬೇಕಾದ, ಎಲ್ಲಾ ರಹಮತಿಗಳು, ಪರವಾನಿಗೆಗಳು, ಅಧಿಕಾರ ಪತ್ರಗಳು, ಸಮ್ಮತಿ ಮತ್ತು ಮಂಜೂರಾತಿಗಳು.

"ಒಪ್ಪಂದದ ಮೌಲ್ಯ" ಅಂದರೆ ನಗರ ಸ್ಥಳೀಯ ಸಂಸ್ಥೆಯು ಒಪ್ಪಂದದ ಅವಧಿಯಲ್ಲಿ ಸೇವೆ ಒದಗಿಸುವವರಿಗೆ ನೀಡುವ ಸೇವಾ ಶುಲ್ಕ.

"ಫೋರ್ಸ ಮೆಜ್ಯೂರ್" ಅಥವಾ "ಫೋರ್ಸ್ ಮೆಜ್ಯೂರ್ ಸಂದರ್ಭ" ಅಂದರೆ ಅನುಚ್ಛೇದ 5ರಲ್ಲಿ ನಿರ್ದಿಷ್ಟಪಡಿಸಿರುವ ಕ್ರಿಯೆ, ಘಟನೆ, ಪರಿಸ್ಥಿತಿ ಅಥವಾ ಸಂಭವ.

"ನಿರ್ವಹಣಾ ಯೋಜನೆ" ಅಂದರೆ ಯೋಜನೆ ಜಾರಿಗಾಗಿ ಅನುಸರಿಸಬೇಕಾದ ಪ್ಲಾನ್, ಇದರಲ್ಲಿ ನಗರ ಸ್ಥಳೀಯ ಸಂಸ್ಥೆಯು ಒಪ್ಪಿಗೆ ಸೂಚಿಸಿರುವುದಕ್ಕಾಗಿ ಸಹಿ ಮಾಡಿರಬೇಕು.

"ಮಹತ್ವದ ಪ್ರತಿಕೂಲ ಪರಿಣಾಮ" ಅಂದರೆ (ಚಿ) ಈ ಒಪ್ಪಂದ ಮತ್ತು ಈ ಒಪ್ಪಂದದ ಪ್ರಾವಿಧಾನಗಳ ಅಡಿಯಲ್ಲಿ, ಸೇವೆ ಒದಗಿಸುವವರ ಸಾಮರ್ಥ್ಯದಲ್ಲಿ ಚಲಾಯಿಸಬಹುದಾದ ಯಾವುದೇ ಹಕ್ಕು, ನಿರ್ವಹಿಸಬೇಕಾದ ಯಾವುದೇ ಕರ್ತವ್ಯ / ಕಟ್ಟುಪಾಡುಗಳ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮ ಮತ್ತು / ಅಥವಾ (ಛ) ಈ ಒಪ್ಪಂದದಂತೆ ನ್ಯಾಯಪರತೆ, ಸಿಂಧುತ್ವ, ಬಂಧಕಗುಣ ಅಥವಾ ಕಾರ್ಯರೂಪದ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮ.

"ಪಕ್ಷಗಳು" ಅಂದರೆ ಈ ಒಪ್ಪಂದದಡಿಯಲ್ಲಿ ಬರುವ ಪಕ್ಷಗಳು ಮತ್ತು 'ಪಕ್ಷ' ವೆಂದರೆ, ಸಂದರ್ಭಕ್ಕೆ ತಕ್ಕಂತೆ ಅವರಲ್ಲಿ ಯಾರಾದರೊಬ್ಬರು.

ಅಂತ್ಯಗೊಳಿಸುವುದು" ಅಂದರೆ ಈ ಒಪ್ಪಂದದ ಪ್ರಾವಿಧಾನಗಳ ಅನ್ವಯ ನಿಗದಿತ ಸಮಯಕ್ಕಿಂತ ಮೊದಲು ಈ ಒಪ್ಪಂದವನ್ನು, ನೋಟೀಸ್ ನೀಡಿ ಅಥವಾ ನೀಡದೆ ಕೊನೆಗೊಳಿಸುವುದು. ಆದರೆ ಸಂದರ್ಭದ ಅವಶ್ಯಕತೆ ಬೇರೆಯಾಗಿರದಿದ್ದಲ್ಲಿ, ಈ ಒಪ್ಪಂದದ ದಿನಾಂಕದಿಂದ ಒಂದು ವರ್ಷದ ಅಂತ್ಯದವರೆಗೂ ಒಪ್ಪಂದವು ಅಂತ್ಯಗೊಳ್ಳುವ ಸಮಯವನ್ನು ಒಳಗೊಂಡಿರುತ್ತದೆ.

"ಅಂತ್ಯಗೊಳಿಸುವ ದಿನಾಂಕ" ಅಂದರೆ, ಅಂತ್ಯಗೊಳಿಸುವ ನೋಟೀಸಲ್ಲಿ ನಿಗದಿಪಡಿಸಿದ ಅಂತ್ಯಗೊಳ್ಳುವ ದಿನದ ದಿನಾಂಕ.

"ಅಂತ್ಯಗೊಳಿಸುವ ನೋಟೀಸ್" ಅಂದರೆ ಈ ಒಪ್ಪಂದದ ಜಾರಿಗೊಳಿಸಬಹುದಾದ ಪ್ರಾವಿಧಾನಗಳ ಅನ್ವಯ ಒಂದು ಪಕ್ಷವು, ಇನ್ನೊಂದು ಪಕ್ಷಕ್ಕೆ ನೀಡುವ ನೋಟಿಸ್.

### 1.2 ಅರ್ಥ ವಿವರಣೆ

Formatted: Bullets and Numbering

ಈ ಒಪ್ಪಂದದಲ್ಲಿ ಸಂದರ್ಭದ ಅವಶ್ಯಕತೆ ಬೇರೆಯಾಗಿರದಿದ್ದಲ್ಲಿ,

a. ಕಾನೂನಿನ ಪ್ರಾವಿಧಾನದ ಉಲ್ಲೇಖವು ಒಪ್ಪಂದಕ್ಕೆ ಅನ್ವಯಿಸುವಂತೆ ಕಾಲ-ಕಾಲಕ್ಕೆ ಮಾಡಲಾಗುವ ಬದಲಾವಣೆ, ಅಥವಾ ಮರು ಜಾರಿ ಅಥವಾ ಕ್ರೂಢೀಕರಿಸಿದ ಪ್ರಾವಿಧಾನಗಳನ್ನು ಒಳಗೊಂಡಿರುತ್ತದೆ ಹಾಗೂ ಇನ್ನು ಮುಂದೆ ನಡೆಯುವ ಯಾವುದೇ ವ್ಯವಹಾರಗಳಿಗೆ ಈ ಬದಲಾವಣೆಗಳು ಅಥವಾ ಮರು ಜಾರಿ ಅಥವಾ ಕ್ರೂಢೀಕರಣ ಅನ್ವಯಿಸುತ್ತದೆ ಅಥವಾ ಅನ್ವಯ ಯೋಗ್ಯವಾಗಿರುತ್ತವೆ.
b. ಅನ್ವಯಿಸುವ ಕಾನೂನುಗಳ ಉಲ್ಲೇಖವು, ಕಾನೂನಿನ ಬಲವುಳ್ಳ ಕಾನೂನುಗಳು, ಕಾಯಿದೆ, ಸುಗ್ರೀವಾಜ್ಞೆ, ನಿಯಮಗಳು, ನಿರ್ಭಂದಗಳು, ಪ್ರಕಟಣೆಗಳು, ಮಾರ್ಗದರ್ಶನಗಳು ಅಥವಾ ಬೈಲಾಗಳನ್ನು ಒಳಗೊಂಡಿರುತ್ತದೆ.
c. ಏಕವಚನವಾಗಿ ಸಂಬೋಧಿಸುವ ಶಬ್ದವು ಬಹುವಚನವನ್ನು ಒಳಗೊಂಡಿರುತ್ತದೆ ಮತ್ತು ಅದಲು-ಬದಲು ಇದೇ ಅರ್ಥವನ್ನು ಹೊಂದಿರುತ್ತದೆ ಮತ್ತು ವ್ಯಕ್ತಿಗಳನ್ನು ಸಂಬೋಧಿಸುವ ಶಬ್ದವು, ಪಾಲುಗಾರಿಕೆ, ಸಂಸ್ಥೆಗಳು, ಕಂಪನಿಗಳು, ಕಾರ್ಪೊರೇಷನ್‌ಗಳು, ಸಹಭಾಗಿತ್ವಗಳು, ಟ್ರಸ್ಟ್‌ಗಳು, ಸಂಘಗಳು ಮತ್ತಿತರ ಅಸ್ತಿತ್ವಗಳನ್ನು ಒಳಗೊಂಡಿರುತ್ತದೆ (ಪ್ರತ್ಯೇಕ ಕಾನೂನು ಅಸ್ತಿತ್ವ ಹೊಂದಿರಲಿ ಅಥವಾ ಹೊಂದಿರದಿರಲಿ)
d. ತಲೆ ಬರಹಗಳು, ಉಲ್ಲೇಖದ ಅನುಕೂಲಕ್ಕಾಗಿ ಮಾತ್ರವಾಗಿದ್ದು, ಒಪ್ಪಂದದ ರಚನೆ ಅಥವಾ ಅರ್ಥವಿವರಣೆಗೆ ಉಪಯೋಗಿಸಬಾರದು ಮತ್ತು ಒಪ್ಪಂದದ ರಚನೆ ಅಥವಾ ಅರ್ಥವಿವರಣೆಗೆ ಧಕ್ಕೆ ತರಬಾರದು.
e. 'ಒಳಗೊಳ್ಳು' ಮತ್ತು 'ಒಳಗೊಂಡಿರುವುದು' ಎಂಬ ಶಬ್ದಗಳನ್ನು ಪಿರಿಮಿತಿ ಇಲ್ಲದಂತೆ ವ್ಯಾಖ್ಯಾನಿಸುವುದು.
f. ದಿನ, ತಿಂಗಳು ಅಥವಾ ವರ್ಷದ ಉಲ್ಲೇಖ ಕ್ರಮವಾಗಿ ಕ್ಯಾಲೆಂಡರ್ ದಿನ, ಕ್ಯಾಲೆಂಡರ್ ತಿಂಗಳು ಮತ್ತು ಕ್ಯಾಲೆಂಡರ್ ವರ್ಷದ ಉಲ್ಲೇಖವಾಗಿರುತ್ತದೆ.
g. ಈ ಒಪ್ಪಂದದ ಪರಿಶಿಷ್ಟಗಳು ಒಪ್ಪಂದದ ಮುಖ್ಯ ಒಕ್ಕಣೆಯಲ್ಲಿ ಸೇರಿದ್ದರೂ, ಒಪ್ಪಂದದ ಸಮಗ್ರ ಭಾಗವಾಗಿರುತ್ತವೆ.
h. ಯಾವುದೇ ವಿವರಣೆಯ ಪರವಾನಗಿ ಅಥವಾ ದಾಖಲೆಯ ಯಾವುದೇ ಉಲ್ಲೇಖವನ್ನು ಆ ಒಪ್ಪಂದದ ಉಲ್ಲೇಖವೆಂದು ವ್ಯಾಖ್ಯಾನಿಸುವುದು. ಯಾವುದೇ ಸಮಯದಲ್ಲಿ ಯಾವುದೇ ಒಪ್ಪಂದಕ್ಕೆ, ಡೀಡ್‌ಗೆ, ಸಾಧನಕ್ಕೆ ಯಾವುದೇ ವಿವರಣಾತ್ಮಕ ಪರವಾನಗಿ ಅಥವಾ ದಾಖಲೆಗೆ ನೀಡಿದ ಯಾವುದೇ ಉಲ್ಲೇಖವು ಆ ಒಪ್ಪಂದಕ್ಕೆ, ಡೀಡ್‌ಗೆ, ಸಾಧನಕ್ಕೆ ಪರವಾನಗಿ ಅಥವಾ ಇತರೇ ದಾಖಲೆಗೆ ಅಂತಹ ಉಲ್ಲೇಖದ ಸಮಯದಲ್ಲಿ ಬದಲಾಯಿಸಿದ, ವ್ಯತ್ಯಯಿಸಿದ, ಕೂಡಿಸಿದ, ಮಾರ್ಪಡಿಸಿದ ಅಥವಾ ತಾತ್ಕಾಲಿಕವಗಿ ವಜಾ ಮಾಡಿದ ಉಲ್ಲೇಖವನ್ನು ಉಲ್ಲೇಖವೆಂದು ವ್ಯಾಖ್ಯಾನಿಸುವುದು.

i. ಸಂದರ್ಭಕ್ಕೆ ಹೊರತಾಗಿರದಿದ್ದಲ್ಲಿ, ಈ ಒಪ್ಪಂದದಲ್ಲಿನ ಉಲ್ಲೇಖವಾಗುವ ಹೇಳಿಕೆಗಳು, ಅನುಚ್ಛೇದಗಳು, ಉಪ ಅನುಚ್ಛೇದಗಳು, ಉಪವಾಕ್ಯಗಳು ಅಥವಾ ಪರಿಶಿಷ್ಟಗಳ ಉಲ್ಲೇಖಗಳು ಈ ಒಪ್ಪಂದದ ಹೇಳಿಕೆಗಳು, ಅನುಚ್ಛೇದಗಳು, ಉಪ ಅನುಚ್ಛೇದಗಳು, ಉಪವಾಕ್ಯಗಳು ಮತ್ತು ಪರಿಶಿಷ್ಟಗಳ ಉಲ್ಲೇಖಗಳೆಂದು ಪರಿಗಣಿಸಲಾಗುತ್ತವೆ ಅಥವಾ ಈ ಒಪ್ಪಂದದ ಉಲ್ಲೇಖಗಳೆಂದು ಪರಿಗಣಿಸಲಾಗುತ್ತವೆ.

j. ಈ ಒಪ್ಪಂದದ ಅಡಿಯಲ್ಲಿ ಅಥವಾ ಅನುಸಾರವಾಗಿ ಯಾವುದೇ ಪಕ್ಷಕ್ಕೆ ಅಗತ್ಯವಾಗುವ ಯಾವುದೇ ಒಪ್ಪಂದ, ಸಮ್ಮತಿ, ಒಪ್ಪಿಗೆ, ಅಧಿಕಾರ ವಹಿಸಿಕೊಡುವುದು, ಸೂಚನೆ, ಸಂವಹನ, ಸಮಾಚಾರ ಅಥವಾ ವರದಿಗಳನ್ನು ಆ ಪಕ್ಷವು ಅಥವಾ ಅವರ ಅಧಿಕೃತ ಪ್ರತಿನಿಧಿಗಳು ಬರವಣಿಗೆಯಲ್ಲಿ ಕೋರಿದಾಗ ಮಾತ್ರ ಸಿಂಧುವಾಗಿರುತ್ತವೆ ಮತ್ತು ನೀಡಲಾಗುತ್ತದೆ.

k. ಯಾವುದೇ ಅವಧಿಯಲ್ಲಿ "ಯಿಂದ" ಪ್ರಾರಂಭವಾಗುವ ನಿರ್ದಿಷ್ಟ ದಿನ, ದಿನಾಂಕ ಮತ್ತು "ವರೆಗೆ" ಅಂತ್ಯವಾಗುವ ನಿರ್ದಿಷ್ಟ ದಿನ, ದಿನಾಂಕದ ಉಲ್ಲೇಖವು, ಆ ಎರಡು ದಿನಗಳು ಅಥವಾ ದಿನಾಂಕಗಳನ್ನು ಒಳಗೊಂಡಿರುತ್ತದೆ.

**ಅನುಚ್ಛೇದ 2**

**ಸೇವೆ ಒದಗಿಸುವವರ ಕಟ್ಟುಪಾಡುಗಳು (ಜವಾಬ್ದಾರಿಗಳು)**

ಇತರೇ ಕಟ್ಟುಪಾಡುಗಳಿಗೆ ವ್ಯತ್ಯಯ ಅಥವ ಬದಲಾವಣೆ ಇಲ್ಲದೆ, ಈ ಒಪ್ಪಂದದಲ್ಲಿ ಇರುವ ಕಟ್ಟುಪಾಡುಗಳ ಜೊತೆಗೆ, ಸೇವೆ ಒದಗಿಸುವವರು ಕೆಳಗಿನ ಕಟ್ಟುಪಾಡುಗಳನ್ನು ಹೊಂದಿರುತ್ತಾರೆ.

**2.1 ಕಾರ್ಯಾಧಾರಿತ ಭದ್ರತೆಯಾಗಿ**

a) ಯೋಜನೆಗೆ ಸಂಬಂಧಿಸಿದ ಕಟ್ಟುಪಾಡುಗಳನ್ನು ಯುಕ್ತ ಸಮಯದಲ್ಲಿ ನಿರ್ವಹಿಸಲು, ಸೇವೆ ಒದಗಿಸುವವರು ಸಲ್ಲಿಸುವ ಇಎಂಡಿ ಮೊತ್ತವನ್ನು ಕಾರ್ಯಾಧಾರಿತ ಭದ್ರತೆಯಾಗಿ ಪರಿಗಣಿಸಲಾಗುವುದು.

b) ಒಪ್ಪಂದದ ದಿನಾಂಕದಿಂದ ಕಾರ್ಯಾಧಾರಿತ ಭದ್ರತೆಯು ಕರಾರಿನ ಅವಧಿ, ಜೊತೆಗೆ ಮೂರು ತಿಂಗಳ ಅಧಿಕ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ.

c) ಸೇವೆ ಒದಗಿಸುವವರು , ಸರಬರಾಜು ಆದೇಶ ನೀಡಿದ ಒಂದು ವಾರದೊಳಗೆ ಕ್ರಿಮಿನಾಶಕಗಳನ್ನು ಸರಬರಾಜು ಮಾಡಬೇಕು.

d) ಕ್ರಿಮಿನಾಶಕಗಳನ್ನು ನಿಗದಿತ ಸ್ಥಳಕ್ಕೆ ( ಆರೋಗ್ಯ ವಿಭಾಗದ ದಾಸ್ತಾನುಶಾಖೆ) ಸರಬರಾಜು ಮಾಡುವವರೆಗೆ ತಗಲುವ ಎಲ್ಲಾ ಸಾಗಣೆ ವೆಚ್ಚಗಳನ್ನು ಸರಬರಾಜುದಾರರೇ ಭರಿಸತಕ್ಕದ್ದು.

e) ಸಾಗಣೆ ವೇಳೆಯಲ್ಲಿ ಉಂಟಾದ ಅಪಘಾತ , ವೈಯಕ್ತಿಕ ಗಾಯ , ಅಪಘಾತದಿಂದ ಉಂಟಾದ ದೇಹದ ಗಾಯ / ಮರಣದ ಸಂದರ್ಭದಲ್ಲಿ ಮೂರನೇ ವ್ಯಕ್ತಿಗೆ ಆದ ಹಾನಿ, ಅಸ್ತಿಗಳಿಗೆ ಆದ ನಷ್ಟ ಅಥವಾ ಹಾನಿ ಇಂತಹ ಎಲ್ಲಾ ಪ್ರಕರಣಗಳಿಗೂ ತನ್ನ ಖರ್ಚು ವೆಚ್ಚದಿಂದಲೇ ಎಲ್ಲಾ ಅವಶ್ಯಕ ವಿಮಾ ಸೌಲಭ್ಯವನ್ನು ಪಡೆದಿರಬೇಕು.

**ಅನುಚ್ಛೇದ 3**

**ಫೋರ್ಸ್ ಮೆಜ್ಯೂರ್**

**ಫೋರ್ಸ್ ಮೆಜ್ಯೂರ್ ಸಂದರ್ಭ**

ಕೆಳಗಿನ ಯಾವುದೇ ಸಂದರ್ಭಗಳು, ಕಾರ್ಯದ ಮೇಲೆ ಮಹತ್ವದ ಪ್ರತಿಕೂಲ ಪರಿಣಾಮ ಬೀರಿದಲ್ಲಿ ಅವುಗಳು ಫೋರ್ಸ್ ಮೆಜ್ಯೂರ್ ಸಂದರ್ಭಗಳಾಗಿರುತ್ತವೆ.

ಭೂಕಂಪ, ಪ್ರವಾಹ, ನೆರೆ, ಭೂಕುಸಿತ.

a. ಸೇವೆ ಒದಗಿಸುವವರು ಅಥವಾ ಸೇವೆ ಒದಗಿಸುವವರಿಂದ ನಿಯೋಜಿಸಲ್ಪಟ್ಟ ಅವರ ಸಿಬ್ಬಂದಿಗಳಿಂದ ಆಗದ ಬೆಂಕಿ ಅನಾಹುತದಿಂದ.

b. ಭಯೋತ್ಪಾದಕ ಕೃತ್ಯ, ಯುದ್ಧ, ದಾಳಿ, ಬಂಡಾಯ, ದೊಂಬಿ, ಸೈನಿಕ ಕಾರ್ಯಾಚರಣೆ ಅಥವಾ ಆಂತರಿಕ ಯುದ್ಧ.
ಫೋರ್ಸ್ ಮೆಜ್ಯೂರ್ ಸಂದರ್ಭದಿಂದಾಗಿ ಈ ಒಪ್ಪಂದದಲ್ಲಿನ ಕಟ್ಟುಪಾಡುಗಳನ್ನು ನಿರ್ವಹಿಸಲು ಪಕ್ಷಗಳು ವಿಫಲಗೊಂಡಲ್ಲಿ, ಒಪ್ಪಂದದಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ ಯಾವುದೇ ಪಕ್ಷವು ಯಾವುದೇ ವಿಧಾನದಲ್ಲಿ ಇನ್ನೊಂದು ಪಕ್ಷಕ್ಕೆ ಫೋರ್ಸ್ ಮೆಜ್ಯೂರ್ ಸಂದರ್ಭವಿರುವವರೆಗು ಬಾಧ್ಯಸ್ಥರಾಗುವುದಿಲ್ಲ.

**ಅನುಚ್ಛೇದ 6**

**ವೈಫಲ್ಯದ ಸಂದರ್ಭಗಳು ಮತ್ತು ಅಂತ್ಯಗೊಳಿಸುವುದು**

6.1 ವೈಫಲ್ಯದ ಸಂದರ್ಭಗಳು

ವೈಫಲ್ಯದ ಸಂದರ್ಭವೆಂದರೆ, ಸೇವೆ ಒದಗಿಸುವವರ ವೈಫಲ್ಯದ ಸಂದರ್ಭ ಅಥವಾ ನಗರ ಸ್ಥಳೀಯ ಸಂಸ್ಥೆಯ ವೈಫಲ್ಯದ ಸಂದರ್ಭ ಅಥವಾ ಸನ್ನಿವೇಶಕ್ಕೆ ಅನುಗುಣವಾಗಿ ಎರಡು ಪಕ್ಷಗಳ ವೈಫಲ್ಯದ ಸಂದರ್ಭ.

a) **ಸೇವೆ ಒದಗಿಸುವವರ ವೈಫಲ್ಯದ ಸಂದರ್ಭ**

ಕೆಳಗೆ ತಿಳಿಸಿರುವ ಸಂದರ್ಭಗಳು, ಸೇವೆ ಒದಗಿಸುವವರ ವೈಫಲ್ಯದ ಸಂದರ್ಭಗಳಾಗಿರುತ್ತವೆ ("ಸೇವೆ ಒದಗಿಸುವವರ ವೈಫಲ್ಯದ ಸಂದರ್ಭ") ಫೋರ್ಸ್ ಮೆಜ್ಯೂರ್ ಸಂದರ್ಭಗಳನ್ನು ಹೊರತುಪಡಿಸಿ.

i. ಸೇವೆ ಒದಗಿಸುವವರು ಸರಬರಾಜು ಆದೇಶ ನೀಡಿದ ಏಳು ದಿನಗಳೊಳಗೆ ಕ್ರಿಮಿನಾಶಕಗಳನ್ನು ಪೂರೈಸದಿದ್ದರೆ
ii. ಸೇವೆ ಒದಗಿಸುವವರು ಐ ಎಸ್ ಐ ಗುಣ ಮಟ್ಟದ ಕ್ರಿಮಿನಾಶಕಗಳನ್ನು ಸರಬರಾಜು ಮಾಡಲು ವಿಫಲವಾದಲ್ಲಿ.
iii. ಸೇವೆ ಒದಗಿಸುವವರು ಯೋಜನೆಯನ್ನು ನಿರಾಕರಿಸಿದರೆ ಅಥವಾ ಕೈಬಿಟ್ಟರೆ

6.2 ವೈಫಲ್ಯದ ಸಂದರ್ಭಗಳಿಂದಾಗಿ ಅಂತ್ಯಗೊಳಿಸುವುದು

a) ಸೇವೆ ಒದಗಿಸುವವರ ವೈಫಲ್ಯದ ಸಂದರ್ಭಗಳಿಂದ ಅಂತ್ಯ ಗೊಳಿಸುವುದು
ಸೇವೆ ಒದಗಿಸುವವರ ವೈಫಲ್ಯದ ಸಂದರ್ಭದಲ್ಲಿ, ನಗರ ಸ್ಥಳೀಯ ಸಂಸ್ಥೆಯು ಈ ಒಪ್ಪಂದದಲ್ಲಿರುವ ಇತರೆ ಹಕ್ಕು ಮತ್ತು ಪರಿಹಾರೋಪಾಯಗಳಿಗೆ ಧಕ್ಕೆಯಾಗದಂತೆ, ವೈಫಲ್ಯದ ಸಂದರ್ಭಗಳನ್ನು ಮತ್ತು ಅಂತ್ಯಗೊಳಿಸುವ ದಿನಾಂಕವನ್ನು ತಿಳಿಸುವ ನೋಟೀಸನ್ನು ನೀಡುವ ಮೂಲಕ ಈ ಒಪ್ಪಂದವನ್ನು ಅಂತ್ಯಗೊಳಿಸಬಹುದು. ಸೇವೆ ಒದಗಿಸುವವರು, ಅಂತ್ಯಗೊಳಿಸುವ ದಿನಾಂಕದ ವರೆಗೂ ಒಪ್ಪಂದದ ಕಟ್ಟು ಪಾಡುಗಳನ್ನು ನಿರ್ವಹಿಸಬೇಕು.

b) ಅಂತ್ಯಗೊಳಿಸಿದಾಗ ಪಾವತಿಗಳು
ಸೇವೆ ಒದಗಿಸುವವರ ವೈಫಲ್ಯದ ಸಂದರ್ಭದಿಂದ ಒಪ್ಪಂದವನ್ನು ಅಂತ್ಯಗೊಳಿಸಿದಲ್ಲಿ, ಸೇವೆ ಒದಗಿಸುವವರಿಗೆ ನಗರ ಸ್ಥಳೀಯ ಸಂಸ್ಥೆಯಿಂದ ಯಾವುದೇ ಪರಿಹಾರವನ್ನು ನೀಡುವುದಿಲ್ಲ ಮತ್ತು ಕಾರ್ಯಾಧಾರಿತ ಭದ್ರತೆಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

## ಅನುಚ್ಛೇದ 7

## ವ್ಯಾಜ್ಯ ಪರಿಹಾರ

7.1 ಸೌಹಾರ್ದಯುತ ಪರಿಹಾರ
ಈ ಒಪ್ಪಂದಕ್ಕೆ ವಿರೋಧಭಾಸವಾಗಿದೆ ಎಂದು ಸ್ಪಷ್ಟಪಡಿಸಿದ ಸಂದರ್ಭಗಳನ್ನು ಹೊರತುಪಡಿಸಿ, ಎರಡು ಪಕ್ಷಗಳ ಮಧ್ಯೆ ಈ ಒಪ್ಪಂದದಿಂದ ಉದ್ಭವವಾಗುವ ಯಾವುದೇ ವ್ಯಾಜ್ಯ, ಅಭಿಪ್ರಾಯ ಭೇದ ಅಥವಾ ಯಾವುದೇ ವಿವಾದಗಳನ್ನು ಮೊದಲ ಪ್ರಯತ್ನದಲ್ಲಿ, ಎರಡು ಪಕ್ಷಗಳು ಪರಸ್ಪರ ಸಂಧಾನದ ಮೂಲಕ ಸೌಹಾರ್ದಯುತವಾಗಿ ಬಗೆಹರಿಸಲು ಪ್ರಯತ್ನ ಮಾಡಲಾಗುವುದು.

7.2 ಪಂಚಾಯಿತಿ / ಮಧ್ಯಸ್ಥಿಕೆ
ಯಾವುದೇ ವ್ಯಾಜ್ಯ ಸೌಹಾರ್ದಯುತವಾಗಿ ಬಗೆಹರಿಸಲು ಸಾಧ್ಯವಾಗದಿದ್ದಲ್ಲಿ ಪಂಚಾಯ್ತಿ ಮೂಲಕ ಬಗೆಹರಿಸಲಾಗುವುದು; ನಗರ ಸ್ಥಳೀಯ ಸಂಸ್ಥೆ ಇರುವ ಜಿಲ್ಲೆಯ ಜಿಲ್ಲಾಧಿಕಾರಿಗಳು ಏಕಮಾತ್ರ ಪಂಚಾಯ್ತಿದಾರರಾಗಿರುತ್ತಾರೆ. ಜಿಲ್ಲಾಧಿಕಾರಿಗಳ ಕಛೇರಿಯು ಸಾಮಾನ್ಯವಾಗಿ ಪಂಚಾಯ್ತಿ ನಡೆಯುವ ಸ್ಥಳವಾಗುತ್ತದೆ. ಪಕ್ಷಗಳು ಆ ತೀರ್ಮಾನವನ್ನು ಒಪ್ಪಕೊಳ್ಳಬೇಕಾಗುತ್ತದೆ ಅಥವಾ ಪಂಚಾಯ್ತಿಯಿಂದ ಬರುವ ತೀರ್ಪು ಪಕ್ಷಗಳಿಗೆ ಬಂಧಕಾರವಾಗಿರುತ್ತದೆ.

ವ್ಯಾಜ್ಯದ ಸಲ್ಲಿಕೆ ಮತ್ತು / ಅಥವಾ ತೀರ್ಮಾನವಾಗುವ ವರೆಗೂ, ಒಪ್ಪಂದದ ಅನ್ವಯ ಇರುವ ಕಟ್ಟುಪಾಡುಗಳನ್ನು ಪಂಚಾಯ್ತಿ ತೀರ್ಪಿಗೆ ಅನುಸಾರವಾಗಿ ಮಾಡಿಕೊಳ್ಳುವ ಮಾರ್ಪಾಟುಗಳಿಗೆ ಯಾವುದೇ ಧಕ್ಕೆಯಾಗದಂತೆ, ಪಕ್ಷಗಳು ನಿರ್ವಹಿಸುತ್ತಿರಬೇಕು.

## ಅನುಚ್ಛೇದ 8

## ಇತರೆ

8.1 ನಿಯಂತ್ರಿಸುವ ಕಾನೂನು ಮತ್ತು ಅಧಿಕಾರ ವ್ಯಾಪ್ತಿ
ಈ ಒಪ್ಪಂದವು ಭಾರತದ ಕಾನೂನುಗಳಿಂದ ನಿಯಂತ್ರಿಸಲ್ಪಡುತ್ತದೆ ಮತ್ತು ಒಪ್ಪಂದದಿಂದ ಉದ್ಭವಿಸುವ ಎಲ್ಲಾ ವಿಚಾರಗಳು, ಜಿಲ್ಲಾ ಕೇಂದ್ರ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಇರುತ್ತವೆ.

8.2 ಉದ್ದೇಶ ಮತ್ತು ಪರಿಣಾಮ
ಎಲ್ಲಾ ಪಕ್ಷಗಳು, ಒಪ್ಪಂದದ ಪ್ರಾವಿಧಾನಗಳನ್ನು ಸಂಪೂರ್ಣವಾಗಿ ಮತ್ತು ಕ್ಲುಪ್ತವಾಗಿ, ಅನುಸರಿಸಿ, ಜಾಗಿಗೊಳಿಸ್ಮತ್ತಾರೆಂದು ಈ ಮೂಲಕವಾಗಿ ಒಪ್ಪಿಕೊಳ್ಳುತ್ತಾರೆ.

8.3 ನೋಟೀಸ್‌ಗಳು
ಒಪ್ಪಂದದ ನಿಬಂಧನೆಗಳನುಸಾರ ನೀಡಲಾಗುವ ನೋಟೀಸ್‌ಗಳು, ಕೋರಿಕೆಗಳು, ಬೇಡಿಕೆಗಳು ಮತ್ತಿತರ ಸಂವಾಹನಗಳನ್ನು ಬರವಣಿಗೆಯ ಮೂಲಕ ಮಾಡಬೇಕು ಮತ್ತು ಅವುಗಳನ್ನು ವೈಯಕ್ತಿಕವಾಗಿ ತಲುಪಿಸಬೇಕು, ಅಂಚೆ ವೆಚ್ಚವನ್ನು ಪಾವತಿಸಿದ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಬೇಕು (ಖಾತರಿಗೊಳಿಸಿಕೊಳ್ಳಬೇಕು ಮತ್ತು ಲಕೋಟೆಯ ಮೇಲೆ ಪೋಸ್ಟೇಜ್ ಪ್ರೀಪೇಡ್ ರಿಜಿಸ್ಟರ್ಡ್ ಅಂಚೆ ಎಂದು ಬರೆದಿರಬೇಕು) ಮತ್ತು ಕೆಳಗೆ ತಿಳಿಸಿದ ವಿಳಾಸ ಅಥವಾ ಕಾಲ-ಕಾಲಕ್ಕೆ ಪಕ್ಷವು ತಿಳಿಸಿದ ವಿಳಾಸ, ವಿಳಾಸಗಳು ಅಥವಾ ಸ್ಥಳಕ್ಕೆ ತಲುಪಿಸಬೇಕು.

**ನಗರ ಸ್ಥಳೀಯ ಸಂಸ್ಥೆಗೆ:----------------ಸೇವೆ ಒದಗಿಸುವವರಿಗೆ:----------------**

ಒಂದು ಪಕ್ಷವು, ಇನ್ನೊಂದು ಪಕ್ಷಕ್ಕೆ, ಬರವಣಿಗೆಯ ಮೂಲಕ ೀರೆ ವಿಳಾಸವನ್ನು ಸೂಚನೆ ನೀಡಿ ತಿಳಿಸಿರದಿದ್ದರೆ, ಈ ಒಪ್ಪಂದದನ್ವಯ ಕಳುಹಿಸಲಾಗುವ ಯಾವುದೇ ನೋಟೀಸ್, ಕೋರಿಕೆ, ಬೇಡಿಕೆ ಅಥವಾ ಇನ್ನಾವುದೇ ಸಂವಾಹನವು

i. ವೈಯಕ್ತಿಕವಾಗಿ ತಲುಪಿಸಿದಲ್ಲಿ, ತಲುಪಿಸಿದ ದಿನದಂದು
ii. ಅಂಚೆಯ ಮೂಲಕ ಕಳುಹಿಸಿದ್ದಲ್ಲಿ, ರವಾನೆ ಮಾಡಿದ ಹದಿನೈದು (15) ದಿನಗಳಲ್ಲಿ
iii. ಟೆಲೆಕ್ಸ್ ಅಥವಾ ಕೇಬಲ್ ಮೂಲಕ ಕಳುಹಿಸಿದ್ದರೆ, ಕಳುಹಿಸಿದ ದಿನಾಂಕದಂದು ತಲುಪಿದೆ ಎಂದು ಪರಿಗಣಿಸಲಾಗುವುದು.

ಮೇಲೆ ತಿಳಿಸಿದ ದಿನಾಂಕದಿಂದ ಈ ಒಪ್ಪಂದವನ್ನು ಅನುಷ್ಠಾನಗೊಳಿಸುವ ಸಾಕ್ಷಿಯಾಗಿ ಎರಡು ಪಕ್ಷಗಳು ಸಹಿ ಮಾಡಿ ಸಲ್ಲಿಸಿವೆ.

ನಗರ ಸ್ಥಳೀಯ ಸಂಸ್ಥೆಯ ಪರವಾಗಿ, ಸೇವೆ ಒದಗಿಸುವವರ ಪರವಾಗಿ:

(ಸಹಿ)[ಹೆಸರು][ಪದನಾಮ ಇವರುಗಳ ಸಮ್ಮುಖದಲ್ಲಿ:1) 2)